ಯಾವಾಗ ಬರುತ್ತಾರೆ? ಅವರು ಯಾವಾಗ ಬರುತ್ತಾರೆಂದು ಕೊನೆಯಪಕ್ಷ ನಮಗೂ ಗೊತ್ತಾಗಲಿಲ್ಲ, ನಾಳೆಯೋ, ನಾಡಿದ್ದೋ, ಆಚೆ ನಾಡಿದ್ದೋ....

ಅಧ್ಯಕ್ಷರು : ಅವರು ರಾತ್ರಿ ಬಂದಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಬಂದದ್ದು ಅವರಿಗೂ ಗೊತ್ತಾಗಲಿಲ್ಲ, ನಮಗೂ ಗೊತ್ತಾಗಲಿಲ್ಲ.

ಪುತ್ತೂರು ತಾಲ್ಲೂಕಿನಲ್ಲಿ ಪರವಾನಗಿ ಇರುವ ಶರಾಬು ಅಂಗಡಿಗಳು

2531 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಪುತ್ತೂರು ತಾಲ್ಲೂಕಿನಲ್ಲಿ ಪರವಾನಗಿ ಇರುವ ಶರಾಬು ಅಂಗಡಿಗಳೆಷ್ಟು? ಪರವಾನಗಿ ಇಲ್ಲದ ಶರಾಬು ಅಂಗಡಿಗಳೆಷ್ಟು?*

ಆ) *ಪರವಾನಗಿ ಇಲ್ಲದ ಶರಾಬು ಅಂಗಡಿಗಳ ಬಗ್ಗೆ ಜಿಲ್ಲಾಧಿಕಾರಿಯವರಿಗೆ ಎಷ್ಟು ಅರ್ಜಿಗಳು ಬಂದಿವೆ. ಇದನ್ನು ಯಾವಾಗ ಮುಚ್ಚಲಾಗುವುದು (ಗ್ರಾಮವಾರು ಪಟ್ಟಿ).*

ಇ) *ಮುಂದಿನ ವರ್ಷ ಎಲ್ಲಾ ಶರಾಬು ವ್ಯವಹಾರವನ್ನು ಅಬಕಾರಿ ಇಲಾಖೆ ಸ್ಥಗಿತಗೊಳಿಸುವ ಇರಾದೆ ಸರ್ಕಾರಕ್ಕಿದೆಯೇ?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

(1) ಪರವಾನಗಿ ಇರುವ ಸಾರಾಯಿ ಅಂಗಡಿಗಳು - 74

(2) ಪರವಾನಗಿ ಇಲ್ಲದ ಸಾರಾಯಿ ಅಂಗಡಿಗಳು ಇರುವುದಿಲ್ಲ

ಆ) ಪರವಾನಗಿ ಇಲ್ಲದ ಸಾರಾಯಿ ಅಂಗಡಿಗಳ ಬಗ್ಗೆ ಪುತ್ತೂರು ತಾಲ್ಲೂಕಿನ ವಿವಿಧ ಗ್ರಾಮಸ್ಥರಿಂದ 6 ದೂರು ಅರ್ಜಿಗಳು ಬಂದಿರುತ್ತವೆ. ಅವುಗಳ ಪೈಕಿ 2 ದೂರು ಅರ್ಜಿಗಳು ಸತ್ಯಕ್ಕೆ ದೂರವಾಗಿವೆ ಎಂದು ವರದಿಯಾಗಿದೆ. ಅಬಕಾರಿ ಇಲಾಖೆಯು ಪುತ್ತೂರು ತಾಲ್ಲೂಕಿನಲ್ಲಿ ಅನಿರೀಕ್ಷಿತ ದಾಳಿ ನಡೆಸಿ ಒಟ್ಟು 11 ಅನಧಿಕೃತ ಸಾರಾಯಿ ಅಂಗಡಿಗಳನ್ನು ಮುಚ್ಚಿಸಿದೆ. (ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ) ಅವುಗಳ ಪೈಕಿ ಮೇಲೆ ತಿಳಿಸಿದ ದೂರುಗಳ 4 ಪ್ರಕರಣಗಳೂ ಸೇರಿವೆ.

ಇ) ಹೊಸ ಹೊಸವಾಗಿ ಪಾನ ನಿಷೇಧವನ್ನು ಜಾರಿಗೆ ತರುವುದನ್ನು ಸರ್ಕಾರವು ಗಂಭೀರವಾಗಿ ಪರಿಶೀಲಿಸುತ್ತಿದೆ.

ಅನುಬಂಧ

ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದ ಗ್ರಾಮಗಳ ವಿವರ

ಕ್ರ. ಸಂ.	ಗ್ರಾಮ	ಅಪರಾಧಿಯ ಹೆಸರು	ವಶಪಡಿಸಿಕೊಂಡ ಸಾರಾಯಿ ಪ್ರಮಾಣ
1)	ಕುರುಬರ ಕೇರಿ ಕಲ್ಯಾಡಿ ಗ್ರಾಮ	ಜಾನ್ ಮ್ಯಾಥ್ಯು ಬಿನ್ ಮಥಾಯಿ ಜೋಸ್	2.400 ಲೀ.ಸಾರಾಯಿ
2)	ಉಪ್ಪಿನಂಗಡಿ ಕರಡಬಸ್ತೆ	ಪ್ರಸಾದ ಬಿನ್ ವಿಶ್ವನಾಥ ರೈ	2.700 ಲೀ.ಸಾರಾಯಿ
3)	ಆರ್ಯಪು ಗ್ರಾಮ ದೊಡ್ಡಕ್ಕ	ಜಯರಾಮ ರೈ ಬಿನ್ ಉಗ್ಗಪ್ಪ ರೈ	2.200 ಲೀ.ಸಾರಾಯಿ
4)	ನೆಟ್ಟಣಿಗೆ ಮುಡ್ನೂರು ಗ್ರಾಮ	ಕೃಷ್ಣಶೆಟ್ಟಿ ಬಿನ್ ಕುಂಜಣ್ಣ ಶೆಟ್ಟಿ	3.700 ಲೀ.ಸಾರಾಯಿ

5)	ಆರ್ಯಪು ಗ್ರಾಮ ದೊಡ್ಡಕ್ಕ	ರಾಮಣ್ಣ ಪೂಜಾರಿ ಬಿನ್ ತಿಮ್ಮಪ್ಪ ಪೂಜಾರಿ	4.500 ಲೀ.ಸಾರಾಯಿ
6)	ಕುರುವೇಲು(ಬೊಳ್ಳಾರು) ಗ್ರಾಮ	ಪುರುಷೋತ್ತಮ ಬಿನ್ ಚನ್ನಪ್ಪ ಪೂಜಾರಿ	3.500 ಲೀ.ಸಾರಾಯಿ
7)	ಮುಳಿಮಜಲು ಗ್ರಾಮ	ಕರುಣಾಕರ ರೈತ ಬಿನ್ ಶೀನಪ್ಪ ರೈ	2.200 ಲೀ.ಸಾರಾಯಿ
8)	ಕುಟ್ರವಾಡಿ ಹೊಸಮಠ ಗ್ರಾಮ	ಪ್ರಸಾದ್ ಬಿನ್ ವಿಶ್ವನಾಥ ರೈ	2.700 ಲೀ.ಸಾರಾಯಿ
9)	ಕೆಂದಂಬಾಡಿ ಗ್ರಾಮ ಸಹ್ಯಾಸಿಗುಡ್ಡೆ	ವಿಠಲರೈ	3.360 ಲೀ.ಸಾರಾಯಿ
10)	ಕೊಳ್ತಿಗೆ ಗ್ರಾಮ ದೊಡ್ಡಕ್ಕ	ಕೆ. ಅಶೋಕ್ ಕುಮಾರ್ ಬಿನ್ ಕೆ. ಜನಾರ್ಧನಪಕ್ಕ	3.360 ಲೀ.ಸಾರಾಯಿ
11)	ಆರಯಡ್ಕ ಗ್ರಾಮ, ಶೇಖಮಲೆ	ಹೆನ್ರಿ ಡಿ.ಸೋಜ	9.500 ಲೀ.ಸಾರಾಯಿ

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಉತ್ತರದಲ್ಲಿ ನಿಗದಿಪಡಿಸಿದಂತೆ ಸುಮಾರು 11 ಪ್ರಕರಣಗಳನ್ನು ಪತ್ತೆ ಹಚ್ಚಿದ್ದೇವೆಂದು ಹೇಳಿದ್ದಾರೆ. ಪುತ್ತೂರು ನಗರಸಭೆಯ ವ್ಯಾಪ್ತಿಯಲ್ಲಿ ಸುಮಾರು 5 ಅನಧಿಕೃತ ಸಾರಾಯಿ ಅಂಗಡಿಗಳು ಈಗಾಗಲೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಅದೇ ರೀತಿ ಬೆಳ್ಳಿಪಾಡಿ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ಕೇವಲ 25 ಮೀಟರ್ ದೂರದಲ್ಲಿ ಇನ್ನೊಂದು ಸಾರಾಯಿ ಅಂಗಡಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಒಂದು ವೇಳೆ ಅದು ಗಮನಕ್ಕೆ ಬಂದಿದ್ದಲ್ಲಿ ಅದನ್ನು ತೆಗೆಯುವಂಥ ಪ್ರಯತ್ನಗಳನ್ನು ಮಾಡಲಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಅಬಕಾರಿ ಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, ಸದಸ್ಯರು ಹೇಳಿದ್ದು ಸರ್ಕಾರದ ಗಮನದಲ್ಲಿ ಇಲ್ಲ, ಒಂದು ವೇಳೆ ಇಂತಹ ಕಡೆ ಇದ್ದಾವೆಂದು ಅವರು ಏನು ಹೇಳಿದರು, ಅವುಗಳನ್ನೆಲ್ಲಾ ಬಂದ್ ಮಾಡುವುದಕ್ಕೆ ನಾನು ಸರ್ಕಾರದ ಪರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಈ ಅಬಕಾರಿ ಇಲಾಖೆಗೆ ಎಲ್ಲಾ ಕಡೆ ಪ್ರತ್ಯೇಕವಾದ ಕಛೇರಿ ಇದ್ದರೂ ಕೂಡ ಸಾಧಾರಣವಾಗಿ ಎಲ್ಲಾ ಕಡೆ ಅಬಕಾರಿ ಇಲಾಖೆಗಳು ಅಲ್ಲಿಯ ಕಾಂಟ್ರಾಕ್ಟ್‌ದಾರರ ಕಛೇರಿಯಲ್ಲೇ ತಮ್ಮ ಕಛೇರಿಯನ್ನು ಮಾಡುವಂತಹ ಸಂದರ್ಭಗಳನ್ನು ನಾವು ನೋಡುತ್ತಿದ್ದೇವೆ. ಈ ಒಂದು ನಿಟ್ಟಿನಲ್ಲಿ ಅಬಕಾರಿ ಇಲಾಖೆಗೆ ಸ್ವಲ್ಪ ಕಾಯಕಲ್ಪ ಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುವುದಕ್ಕೆ ತಯಾರಿದೆಯೇ?

ಶ್ರೀ ರಮೇಶ್ ಸಿ. ಜಿಗಿಜಿಣಗಿ : ಅಧ್ಯಕ್ಷರೆ, ಈ ಕಾಯಕಲ್ಪ ಎಂದು ಹೇಳಿದರೆ ನನಗೆ ಸ್ವಲ್ಪ ಅರ್ಥಮಾಡಿಕೊಳ್ಳುವುದು ಕಷ್ಟವಾಯಿತು. ಅವರು ಮಂಗಳೂರು ಭಾಷೆಯಲ್ಲಿ ಹೇಳುತ್ತಿದ್ದಾರೆ, ನಾನು ಬಿಜಾಪುರದವನು, ತಾವು ಸ್ವಲ್ಪ ಬಿಡಿಸಿ ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಅಬಕಾರಿ ಇಲಾಖೆಯಲ್ಲಿರುವಂತಹ ಎಲ್ಲಾ ಅಧಿಕಾರಿಗಳು ಹೆಚ್ಚಾಗಿ ಅವರ ಕಛೇರಿಯಲ್ಲಿ ಇರುವುದಿಲ್ಲ, ಅವರು ಕಂಟ್ರಾಕ್ಟ್‌ದಾರರ ಕಛೇರಿಯಲ್ಲಿ ಕುಳಿತುಕೊಂಡು ಅವರ ಜೊತೆಯಲ್ಲಿ ಶಾಮೀಲಾಗಿದ್ದುಕೊಂಡು, ಅವರು ಹೇಳಿದಂತೆ ನಡೆದುಕೊಳ್ಳುವಂತಹ ವ್ಯವಸ್ಥೆಯಾಗಿದೆ. ಇದರಿಂದ ನಮ್ಮ ಅರಿವಿಗೆ ಬಂದಿರುವುದೇನೆಂದರೆ, ಅಬಕಾರಿ ಇಲಾಖೆ ಎಂದರೆ, ಅದು ಕಂಟ್ರಾಕ್ಟ್‌ದಾರರ ಒಂದು ಸಹ ಸಂಸ್ಥೆ ಎಂದು ಹೇಳುವಂತಹ ರೀತಿಯಲ್ಲಿ ಇವತ್ತು ಅದು ನಡೆಯುತ್ತಿದೆ.

ಇದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಒಂದು ವೇಳೆ ಅಂತಹದ್ದು ಬಂದರೆ, ಮುಂದಿನ ದಿನಗಳಲ್ಲಾದರೂ ಅಬಕಾರಿ ಇಲಾಖೆಗೆ ನಿಗದಿತ ರೂಪದಲ್ಲಿ ಕೆಲಸಗಳನ್ನು ಮಾಡುವುದಕ್ಕೆ ಸರ್ಕಾರ ನಿರ್ದೇಶನವನ್ನು ಕೊಡುವುದೇ? ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಸೂಕ್ತವಾದಂಥ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ.

ಡಾ|| ಯು. ಚಿತ್ತರಂಜನ್ : ಉತ್ತರದಲ್ಲಿ ಎಲ್ಲಾ 11 ಅಪರಾಧಗಳಲ್ಲಿ 10 ಅಪರಾಧಗಳು 7.5 ಲೀಟರ್‌ಗಿಂತ ಕಡಿಮೆ ಇರುವಂತಹದ್ದನ್ನು ಹಿಡಿದಿದ್ದೀರಿ ಎನ್ನುವುದು ಗೊತ್ತಾಗುತ್ತದೆ. How can it stand in the court of law when there is a rule that one can possess 7.5 ltrs? None of these cases will stand. ಇದು ಕೇವಲ ಕಣ್ಣಿಗೆ ಮಣ್ಣೆರಚುವಂತಹ ತಂತ್ರವೆಂದು ಕಾಣುತ್ತದೆ. ಹಾಗಾಗಿ, ದಯವಿಟ್ಟು ಇವತ್ತು ಒಬ್ಬ 7.5 ಲೀಟರ್ ಸಾರಾಯಿಯನ್ನು ಹೊಂದಬಹುದೆಂದು ಏನು ಕಾನೂನು ಇದೆ, ಅದನ್ನು ಬದಲಾವಣೆ ಮಾಡುವುದಕ್ಕೆ ತಾವು ತೀವ್ರವಾಗಿ ಏನಾದರೂ ಪ್ರಯತ್ನವನ್ನು ಮಾಡುತ್ತೀರೋ ಹೇಗೆ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಗೆ ಅದರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ನಾನು ಹೇಳುತ್ತೇನೆ.

ಅಧ್ಯಕ್ಷರು : ಸೋಮಣ್ಣನವರೆ ತಮ್ಮ 2523ಪ್ರಶ್ನೆಗೆ ಸಂಬಂಧಿಸಿದಂತೆ, ನಗರಾಭಿವೃದ್ಧಿ ಮಂತ್ರಿಗಳು ದೆಹಲಿಯಲ್ಲಿದ್ದಾರೆ, ಅವರು ನನ್ನ ಅನುಮತಿಯನ್ನು ಪಡೆದುಕೊಂಡು ಹೋಗಿದ್ದಾರೆ. ಏನು ಬದಲಿ ವ್ಯವಸ್ಥೆ ಮಾಡಿದಂತೆ ಕಾಣುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದಾರೆಂದರೆ ಒಪ್ಪಿಕೊಳ್ಳೋಣ. ಏಕೆಂದರೆ, ಅವರೂ ಕೂಡ 3-4 ದಿವಸ ಹೋಗಬಾರದು. ಯಾವುದೇ ಒಂದು ಕೆಲಸಕ್ಕೆ ಹೋದರೂ ಕೂಡ ಯಾರಿಗಾದರೂ ಒಪ್ಪಿಸಿ ಹೋದರೆ ಪರವಾಗಿಲ್ಲ. 4 ದಿವಸ ಅವರು ಹೋದರೆ, ಅವರ ಹಿಂದೆ ಬೇರೆಯವರು ಹೋದರು. ಅವರು ಯಾರಿಗೂ ಹೇಳಿ ಹೋಗುವುದಿಲ್ಲ, ಕೆಲಸವನ್ನೂ ಒಪ್ಪಿಸುವುದಿಲ್ಲವೆಂದರೆ ನಾವು ಯಾರನ್ನು ಕೇಳಬೇಕು?

ಅಧ್ಯಕ್ಷರು : ನಗರಾಭಿವೃದ್ಧಿ ಮಂತ್ರಿಗಳು ದೆಹಲಿಯಲ್ಲಿ ಯಾವುದೋ ಸಮ್ಮೇಳನ ಇದೆ ಅದಕ್ಕೆ ನಾನು ಹೋಗುತ್ತಿದ್ದೇನೆಂದು ನನ್ನ ಅನುಮತಿಯನ್ನು ತೆಗೆದುಕೊಂಡು ಹೋಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವ ಕಾನ್ಫರೆನ್ಸ್ ನಾನಂತೂ ಅದರ ಬಗ್ಗೆ ಪತ್ರಿಕೆಗಳಲ್ಲಿ ಓದಲಿಲ್ಲ. ಯಾವ ಕಾನ್ಫರೆನ್ಸ್ ಬಗ್ಗೆ ಯಾವ ಡಿಸಿಷನ್ ತೆಗೆದುಕೊಂಡಿದ್ದು ಪತ್ರಿಕೆಗಳಲ್ಲಿ ಬಂದಿಲ್ಲ. ನಗರಾಭಿವೃದ್ಧಿ ಸಚಿವರುಗಳ ಕಾನ್ಫರೆನ್ಸ್ ಬಗ್ಗೆಯೂ ಕೂಡ ಬಂದಿಲ್ಲ. ನಾನು ಅವರನ್ನು ದೂರದರ್ಶನದಲ್ಲೂ ನೋಡಲಿಲ್ಲ, ರೇಡಿಯೋದಲ್ಲೂ ಕೇಳಲಿಲ್ಲ.

ಅಧ್ಯಕ್ಷರು : ಸೋಮಣ್ಣನವರೆ ಕಾನೂನು ಮಂತ್ರಿಗಳು ಬರಲಿ ಅಮೇಲೆ ತೆಗೆದು ಕೊಳ್ಳೋಣ. ಸೋಮಶೇಖರ್‌ರವರೆ, ತಮ್ಮ ಪ್ರಶ್ನೆಗೆ ಮುಖ್ಯಮಂತ್ರಿಗಳು ಕೇಂದ್ರ ಸ್ಥಾನದಲ್ಲಿ ಇಲ್ಲ. He has availed my permission. I will list out the question on the next day when the Chief Minister is available. Kindly co-operate.